ಇದೆ. ಮೂರನೆಯದಾಗಿ, ಮಾನ್ಯ ಅಕ್ಕಿಯವರು ಹೇಳಿದಂತೆ ಕೆ.ಸಿ.ಸಿ. ಬ್ಯಾಂಕ್‌ನಲ್ಲಿ ಜಿಲ್ಲೆಗಳಲ್ಲಿ ಯಾವ ರೈರು ಸಹ ಡಿಫಾಲ್ಟರ್ ಆಗಿಲ್ಲ. ರೈತರು ತೆಗೆದುಕೊಂಡಿರುವ ಸಾಲವನ್ನು ವಾಪಸ್ ಕೊಡುತ್ತಲೇ ಇದ್ದಾರೆ. ಡಿಫಾಲ್ಟರ್ ಯಾರಾಗಿದ್ದಾರೆಂದರೆ ನಾನ್ ಅಫಿಶಿಯಲ್‌ಗಳೇನು ಸಾಲವನ್ನು ತೆಗೆದುಕೊಂಡಿದ್ದಾರೆ, ನಮ್ಮಥ ಹಿರಿಯರು, ಸಹಕಾರಿಗಳು ಎಂದು ಹೇಳಿಕೊಳ್ಳುತ್ತೇವಲ್ಲಾ ಆ ರೀತಿ ನಮ್ಮಂಥವರೇ ತೆಗೆದುಕೊಂಡಿರತಕ್ಕದ್ದೆ ಹೆಚ್ಚು ಸಾಲ ಅಲ್ಲಿ ಡಿಫಾಲ್ಟರ್ ಆಗಿ ಆ ಬ್ಯಾಂಕ್ ದುಸ್ಥಿತಿಗೆ ಬರುವುದಕ್ಕೆ ಕಾರಣವಾಗಿದೆ. ಆದ್ದರಿಂದ ಸರ್ಕಾರ ಸಮಗ್ರವಾಗಿ ಎಲ್ಲಾ ಬ್ಯಾಂಕುಗಳಿಗೂ ಕೂಡ ಸರ್ಕಾರಿ ಖಾತ್ರಿಯನ್ನು ಕೊಟ್ಟು ಬೆಂಗಳೂರು ಜಿಲ್ಲಾ ಬ್ಯಾಂಕ್, ಗುಲ್ಬರ್ಗಾ, ಕೋಲಾರ ಮತ್ತು ಕೆ.ಸಿ.ಸಿ. ಬ್ಯಾಂಕು ಈ ನಾಲ್ಕಕ್ಕೂ ಕೂಡ ಒಟ್ಟಿಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

(ಆ) ವಿಷಯ: ಪೌರ ಕಾರ್ಮಿಕರ ವಿಶೇಷ ಸೌಲಭ್ಯಗಳ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ(ಗುರುಮಿಟ್‌ಕಲ್): ಮಾನ್ಯ ಅಧ್ಯಕ್ಷರೆ, ನಾನು ಕಾಲಿಂಗ್ ಅಟೆನ್‌ಷನ್ ಕಳುಹಿಸಿ ಸುಮಾರು ಇಪ್ಪತ್ತು ದಿವಸವಾಯಿತು. ಅದು ಬರಲೇ ಇಲ್ಲ. ಆದರೂ ಮುಖ್ಯಮಂತ್ರಿಗಳಿದ್ದಾರೆ, ಹಣಕಾಸು ಸಚಿವರು ಇಲ್ಲ. ಮುಖ್ಯಮಂತ್ರಿಗಳು ನಿರ್ಣಯ ತೆಗೆದುಕೊಳ್ಳಬಹುದು. ರಾಜ್ಯದಲ್ಲಿ ಸುಮಾರು 227 ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳು ಇದೆ. ಅದರಲ್ಲಿ ಸುಮಾರು 70 ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಆದರೆ ಅವರ ವಿಶೇಷ ಸೌಲಭ್ಯಗಳು, ಅದರಲ್ಲಿ ಪೆನ್‌ಷನ್, ಸೇವಾ ಭದ್ರತೆ ಇಂಥ ಸೌಲಭ್ಯಗಳಿಂದ ಅವರು ವಂಚಿತರಾಗಿದ್ದಾರೆ. ಅದಕ್ಕೆ ಅವರು ಈಗಾಗಲೇ ಸರ್ಕಾರಕ್ಕೆ ನೋಟೀಸ್ ಕೊಟ್ಟು ನೀವು ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ನಾವು ಈ ಆಗಸ್ಟ್ ತಿಂಗಳಿನಿಂದ ಸತ್ಯಾಗ್ರಹ ಪ್ರಾರಂಭ ಮಾಡುತ್ತೇವೆ ಮತ್ತು ಅನೇಕ ಕಡೆ ಬಾಯ್‌ಕಾಟ್ ಮಾಡತಕ್ಕ ಪ್ರಸಂಗ ಬರುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು. ದಯವಿಟ್ಟು ಈ ಎಪ್ಪತ್ತು ಸಾವಿರ ಪೌರ ಕಾರ್ಮಿಕರೇನಿದ್ದಾರೆ, ಅವರ ಸಹಾಯಕ್ಕೆ ಬರಬೇಕೆಂದು ಅವರು ಕೇಳಿಕೊಂಡು ಮಾನ್ಯ ಮುಖ್ಯಮಂತ್ರಿಯವರಿಗೂ ಅವರು 28ನೇ ತಾರೀಖು ಮೆಮೊರ್ಯಾಡಂನ್ನು ಸಲ್ಲಿಸಿದ್ದಾರೆ. ಅದಕ್ಕೆ ನಾನು ಕೇಳಿಕೊಳ್ಳತಕ್ಕದ್ದು ಇಷ್ಟೆ. ಇದಕ್ಕೆ ಅವಕಾಶ ಮಾಡಿಕೊಡದಿದ್ದರೆ ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿ ಗಲಾಟೆ

ಪ್ರಾರಂಭವಾಗುತ್ತದೆ. ಒಬ್ಬರಲ್ಲ ಒಬ್ಬರು ಮುಖಂಡರು ಮುಂದಾಳತ್ವವನ್ನು ವಹಿಸಿಕೊಂಡು ಅಲ್ಲಿ ಸ್ವಚ್ಛತೆಗೆ ತಾಪತ್ರೆಯವಾಗುತ್ತದೆ. ಎರಡನೆಯದು, ಈಗಾಗಲೇ ಅನೇಕ ರೋಗಗಳು ಚಿಕನ್ ಗುನ್ಯಾ ಇಂಥ ರೋಗಗಳು ಸ್ಪ್ರೆಡ್ ಆಗುತ್ತಿದೆ. ಆದ್ದರಿಂದ ನಾಳೆ ಆರೋಗ್ಯದ ಮೇಲೆ ಸಹ ಪರಿಣಾಮ ಆಗುತ್ತದೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಏನಾದರೂ ಕ್ರಮ ಜರುಗಿಸಿ ಅವರನ್ನು ಕರೆದು ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಏನು ಸದನದ ಕೆಲವು ಸದಸ್ಯರುಗಳು ರಾಜ್ಯ ಸರ್ಕಾರ ಇತ್ತೀಚೆಗೆ ನಾಲ್ಕು ಪರ್‌ಸೆಂಟ್ ಬಡ್ಡಿಗೆ ರೈತರಿಗೆ ಸಾಲವನ್ನು ಕೊಡತಕ್ಕ ಕಾರ್ಯಕ್ರಮವನ್ನು ಜಾರಿಗೊಳಿಸುವ ತೀರ್ಮಾನ ಮಾಡಿದೆ, ಆ ಒಂದು ವಿಷಯವಾಗಿ ಕೆಲವೊಂದು ಸಮಸ್ಯೆಗಳನ್ನು ಈ ಸದನದಲ್ಲಿ ಗಮನಸೆಳೆದಿದ್ದಾರೆ. ಅದರ ಬಗ್ಗೆ ಒಂದೆರಡು ದಿವಸಗಳಲ್ಲೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ, ಆರ್ಥಿಕ ಇಲಾಖೆಯ ಅಧಿಕಾರಿಗಳ ಸಭೆಯನ್ನು ಕರೆದು ಈ ಸಮಸ್ಯೆಯನ್ನು ಬಗೆಹರಿಸಲು ಒಂದೆರಡು ದಿವಸದಲ್ಲಿ ಗಮನಕ್ಕೆ ತರುತ್ತೇನೆಂದು ತಮ್ಮ ಮೂಲಕ ಎಲ್ಲಾ ಸದಸ್ಯರುಗಳ ಗಮನಕ್ಕೆ ತರುತ್ತೇನೆ.

ಅದೇ ರೀತಿ, ಸನ್ಮಾನ್ಯ ಹಿರಿಯ ಸದಸ್ಯರಾಗಿರುವ ಮಲ್ಲಿಕಾರ್ಜುನ ಖರ್ಗೆಯವರು, ಏನೊಂದು ಈ ನಗರಸಭೆಗಳ ನೌಕರವರ್ಗದ ವಿಷಯದಲ್ಲಿ, ಕೆಲವು ಬೇಡಿಕೆಗಳನ್ನು ನೌಕರರು ಇಟ್ಟಿದ್ದಾರೆ, ಆ ಬಗ್ಗೆ ಗಮನವನ್ನು ಏನು ಸೆಳೆದಿದ್ದಾರೆ, ನಾನು ಈ ಅಧಿವೇಶನ ಮುಗಿದ ನಂತರ ಗಮನಹರಿಸುತ್ತೇನೆ, ಏಕೆಂದರೆ, ಈ ಸಮಸ್ಯೆಗಳು ಹಲವಾರು ವರ್ಷಗಳಿಂದ ಇವೆ, ಇವನ್ನು ಬಗೆಹರಿಸುವುದಕ್ಕೆ ತೀರ್ಮಾನ ಮಾಡುವುದಕ್ಕೆ ಎಲ್ಲಾ ಅಧಿಕಾರಿಗಳನ್ನು ಕರೆಯಿಸಿ ಚರ್ಚೆ ಮಾಡಿ, ಸರ್ಕಾರ ಒಂದು ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಪಡುತ್ತೇನೆಂದು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಈಗ ನಿಯಮ 69ರ ಮೇಲಿನ ಚರ್ಚೆಗೆ ಉತ್ತರ

11. ನಿಯಮ 69ರ ಮೇಲಿನ ಚರ್ಚೆಗೆ ಉತ್ತರ

ವಿಷಯ:– ಅಕ್ರಮ ಗಣಿಗಾರಿಕೆಗೆ ಸಂಬಂಧಪಟ್ಟಂತೆ ನಡೆದ ಚರ್ಚೆಗೆ ಉತ್ತರ